# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **324** |
| ಉತ್ತರಿಸಬೇಕಾದ ದಿನಾಂಕ | : | 15.12.2021 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ವಿವಿಧ ಜಿಲ್ಲೆಗಳು ಹಾಗೂ ಬೆಂಗಳೂರು ಸೇರಿದಂತೆ ಇರುವ ಕೊಳಗೇರಿಗಳ ಸಂಖ್ಯೆ ಎಷ್ಟು ; | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 2855 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು, ಅವುಗಳ ಪೈಕಿ 2750 ಕೊಳಚೆ ಪ್ರದೇಶಗಳನ್ನು ಮಂಡಳಿಯ ಕಾಯಿದೆ ಪ್ರಕಾರ ಘೋಷಿಸಲಾಗಿದೆ.<br>ಬೆಂಗಳೂರು ನಗರದಲ್ಲಿ 435 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, ಅವುಗಳ ಪೈಕಿ 409 ಕೊಳಚೆ ಪ್ರದೇಶಗಳನ್ನು ಮಂಡಳಿಯ ಕಾಯಿದೆ ಪ್ರಕಾರ ಘೋಷಿಸಲಾಗಿದೆ. |
| (ಆ) | ಈ ಕೊಳಗೇರಿಗಳಲ್ಲಿ ಅಧಿಸೂಚಿತ ಹಾಗೂ ಅಧಿಸೂಚಿತವಲ್ಲದ ಕೊಳಗೇರಿಗಳ ಸಂಖ್ಯೆ ಎಷ್ಟು ; | ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಬೆಂಗಳೂರು ನಗರದಲ್ಲಿನ ಅಧಿಸೂಚಿತ ಹಾಗೂ ಅಧಿಸೂಚಿತವಲ್ಲದ ಕೊಳಚೆ ಪ್ರದೇಶಗಳ ವಿವರ ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| (ಇ) | ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕೊಳಗೇರಿಗಳ ಅಭಿವೃದ್ಧಿಗಾಗಿ ವಿವಿಧ ಕಾರ್ಯ ಕ್ರಮಗಳ ಅಡಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಂದು ಅನುದಾನ ಎಷ್ಟು ; ನೀಡಿದ ಅನುದಾನದಡಿಯಲ್ಲಿ ಸರ್ಕಾರದ ಕೈಗೊಂಡ ವಿವಿಧ ಯೋಜನೆಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕೊಳಚೆ ಸುಧಾರಣೆ ಯೋಜನೆ ಮತ್ತು ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) ಯಡಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ. (ರೂ.ಕೋಟಿಗಳಲ್ಲಿ) (see table below) |
| (ಈ) | ಕೊಳಗೇರಿಗಳಲ್ಲಿ ವಾಸಿಸುತ್ತಿರುವ ಜನರ ಜೀವನ ಮಟ್ಟ ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು) | ಕೊಳಗೇರಿಗಳಲ್ಲಿ ವಾಸಿಸುತ್ತಿರುವ ಜನರ ಜೀವನ ಮಟ್ಟವನ್ನು ಸುಧಾರಿಸುವ ಸಾಮಾಜಿಕ ಅರಿವು ಮೂಡಿಸುವ ಮಾಹಿತಿ, ಶಿಕ್ಷಣ ಮತ್ತು ಸಂವಹನ(ಐ.ಇ.ಸಿ) ನೀಡಲಾಗುತ್ತಿದ್ದು, ಈಗ ಕಳೆದ ಎರಡು ವರ್ಷಗಳಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವುದಿಲ್ಲ. |

(ರೂ.ಕೋಟಿಗಳಲ್ಲಿ)

| ಯೋಜನೆ | 2019-20 | | 2020-21 | |
|---|---|---|---|---|
| | ಕೇಂದ್ರ | ರಾಜ್ಯ | ಕೇಂದ್ರ | ರಾಜ್ಯ |
| ಕೊಳಚೆ ಸುಧಾರಣೆ | - | 28.12 | - | 145.00 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ | - | 506.73 | - | 123.27 |
| ಒಟ್ಟು | - | 534.85 | - | 268.27 |

ಸಂಖ್ಯೆ :ವಇ 142 ಎಸ್‌ಬಿಎಂ 2021

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

ಅನುಬಂಧ 1

3

# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

## ರಾಜ್ಯಾದ್ಯಂತ ಜಿಲ್ಲಾವಾರು ಕೊಳಚೆ ಪ್ರದೇಶಗಳ ಘೋಷ್ವಾರೆ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ | ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ | ಗುರುತಿಸಿ ಘೋಷಣೆಗೆ ಬಾಕಿ ಇರುವ ಕೊಳಗೇರಿ ಪ್ರದೇಶಗಳ ಸಂಖ್ಯೆ |
|---|---|---|---|---|
| 1 | ಬೆಂಗಳೂರು ನಗರ | 435 | 409 | 26 |
| 2 | ಬೆಂಗಳೂರು ಗ್ರಾಮಾಂತರ | 33 | 33 | 0 |
| 3 | ಬಾಗಲಕೋಟೆ | 100 | 84 | 16 |
| 4 | ಬಳ್ಳಾರಿ | 198 | 185 | 13 |
| 5 | ಬೆಳಗಾವಿ | 193 | 193 | 0 |
| 6 | ಬೀದರ್ | 68 | 68 | 0 |
| 7 | ಚಿಕ್ಕಬಳ್ಳಾಪುರ | 39 | 39 | 0 |
| 8 | ಚಿಕ್ಕಮಗಳೂರು | 54 | 54 | 0 |
| 9 | ಚಿತ್ರದುರ್ಗ | 63 | 63 | 0 |
| 10 | ಚಾಮರಾಜನಗರ | 68 | 66 | 2 |
| 11 | ದಾವಣಗೆರೆ | 81 | 81 | 0 |
| 12 | ಧಾರವಾಡ | 128 | 127 | 1 |
| 13 | ದಕ್ಷಿಣ ಕನ್ನಡ | 23 | 23 | 0 |
| 14 | ಗದಗ | 87 | 87 | 0 |
| 15 | ಹಾಸನ | 105 | 105 | 0 |
| 16 | ಹಾವೇರಿ | 96 | 96 | 0 |
| 17 | ಕಲಬುರಗಿ | 147 | 147 | 0 |
| 18 | ಕೊಡಗು | 10 | 10 | 0 |
| 19 | ಕೋಲಾರ | 61 | 61 | 0 |
| 20 | ಕೊಪ್ಪಳ | 45 | 45 | 0 |
| 21 | ಮಂಡ್ಯ | 76 | 55 | 21 |
| 22 | ಮೈಸೂರು | 115 | 114 | 1 |
| 23 | ರಾಯಚೂರು | 82 | 82 | 0 |
| 24 | ರಾಮನಗರ | 55 | 51 | 4 |
| 25 | ಶಿವಮೊಗ್ಗ | 166 | 164 | 2 |
| 26 | ತುಮಕೂರು | 130 | 126 | 4 |
| 27 | ಉತ್ತರ ಕನ್ನಡ | 40 | 36 | 4 |
| 28 | ಉಡುಪಿ | 17 | 17 | 0 |
| 29 | ವಿಜಯಪುರ | 91 | 80 | 11 |
| 30 | ಯಾದಗಿರ್ | 49 | 49 | 0 |
| | ಒಟ್ಟು | 2855 | 2750 | 105 |

ಸಹಾಯಕ ಕಂದಾಯ ಅಧಿಕಾರಿ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಬೆಂಗಳೂರು.